ವಿಜಯವಾಣಿ 5-3-17

# ಎಲ್‌ಇಡಿ ಬೆಳಕಲ್ಲಿ ಮಿಂಚಲಿದೆ ನಗರ

## ಶೀಘ್ರದಲ್ಲೇ ಮಲೇಷ್ಯಾ ಕಂಪನಿ ಜತೆ ಸರ್ಕಾರ ಒಪ್ಪಂದ | ವಿದ್ಯುತ್ ಕಂಬಗಳಿಗೂ ಅಳವಡಿಸಲು ನಿರ್ಧಾರ



ನಗರದಲ್ಲಿ ಎಲ್‌ಇಡಿ ಬೀದಿದೀಪ ಅಳವಡಿಸುವ ಕುರಿತು ಸಚಿವ ಕೆ.ಜೆ ಜಾರ್ಜ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಮೇಯರ್ ಜಿ. ಪದ್ಮಾವತಿ, ಪಾಲಿಕೆ ಆಯುಕ್ತ ಮಂಜುನಾಥ ಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಮಲೇಷ್ಯಾ ಕಂಪನಿಯ ಸಹಯೋಗದಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಸಂಪೂರ್ಣ ಎಲ್‌ಇಡಿ ಬೀದಿದೀಪ ಅಳವಡಿಸಲು ಸರ್ಕಾರ ನಿರ್ಧರಿಸಿದೆ.

ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ಶನಿವಾರ ನಡೆದ ಸಭೆಯಲ್ಲಿ ಈ ಕುರಿತು ತೀರ್ಮಾನಿಸಲಾಯಿತು.

**» ಪ್ರಮುಖ ರಸ್ತೆಗಳ ವಿದ್ಯುತ್ ಕಂಬಗಳೂ ಬದಲಾಗಲಿವೆ**

ಮಲೇಷ್ಯಾ ಕಂಪನಿಯೇ ಬೆಂಗಳೂರಿನ ಎಲ್ಲ ವಿದ್ಯುತ್ ಕಂಬಗಳಿಗೂ ಎಲ್‌ಇಡಿ ಅಳವಡಿಸುತ್ತದೆ. ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ ಸೇರಿ ಪ್ರಮುಖ ರಸ್ತೆಗಳ ಕಂಬಗಳನ್ನೂ ಬದಲಾಯಿಸಲಿದೆ. ಕಂಪನಿ ಪ್ರಸ್ತಾವನೆಗೆ ಸರ್ಕಾರ ಒಪ್ಪಿಗೆ ನೀಡಿದ್ದು, ಸರ್ಕಾರದ ವತಿಯಿಂದ ಯಾವುದೇ ಹಣವನ್ನು ಯೋಜನೆಗೆ ನೀಡಬೇಕಿಲ್ಲ.

ಶೀಘ್ರದಲ್ಲೇ ಮಲೇಷ್ಯಾ ಪ್ರಧಾನಿ ರಾಜ್ಯಕ್ಕೆ ಆಗಮಿಸಲಿದ್ದು, ಸಿಎಂ ಸಿದ್ದರಾಮಯ್ಯ ಜತೆಗೆ ಒಪ್ಪಂದಕ್ಕೆ ಸಹಿ ಹಾಕಲಿದ್ದಾರೆ ಎಂದು ಸಭೆಯಲ್ಲಿ ಹಾಜರಿದ್ದ ಮೇಯರ್ ಜಿ. ಪದ್ಮಾವತಿ 'ವಿಜಯವಾಣಿ'ಗೆ ತಿಳಿಸಿದ್ದಾರೆ. ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ಮತ್ತಿತರರು ಸಭೆಯಲ್ಲಿದ್ದರು.

### ಒಎಫ್‌ಸಿ ಸಮಸ್ಯೆಗೂ ಪರಿಹಾರ?

**ನೆಲದಲ್ಲಿ ಒಎಫ್‌ಸಿ ಕೇಬಲ್ ಅಳವಡಿಸಿ, ಕಾಮಗಾರಿ ವೇಳೆ ಅಗೆದು ಹಾಳು ಮಾಡುವುದು ನಡೆದೇ ಇದೆ. ಎಲ್‌ಇಡಿ ಯೋಜನೆಯಲ್ಲಿ ಕಂಬದಿಂದ ಕಂಬಕ್ಕೆ ಕಂಪನಿಯೇ ತೆಳ್ಳನೆ ತಂತಿ ಎಳೆಯುತ್ತದೆ. ಅವಶ್ಯಕತೆಯುಳ್ಳವರು ಇದರಿಂದಲೇ ವಿದ್ಯುತ್ ಸಂಪರ್ಕ ಪಡೆಯಬಹುದು.**

> ಎಲ್‌ಇಡಿ ವಿದ್ಯುತ್ ದೀಪಗಳು ಹೆಚ್ಚಿನ ಬೆಳಕು ನೀಡುತ್ತವೆ. ವಿದ್ಯುತ್ ಬಳಕೆಯೂ ಗಣನೀಯವಾಗಿ ಕಡಿಮೆಯಾಗಲಿದೆ. ನಮ್ಮಿಂದ ಹಣ ವೆಚ್ಚವಾಗದೆ ಸೌಲಭ್ಯ ದೊರಕುವ ಈ ಯೋಜನೆ ಉತ್ತಮವಾಗಿದೆ.
>
> | ಜಿ. ಪದ್ಮಾವತಿ ಮೇಯರ್

### ಶೂನ್ಯ ಹೂಡಿಕೆ

**ಯೋಜನೆಯ ಸಂಪೂರ್ಣ ವೆಚ್ಚವನ್ನು ಕಂಪನಿಯೇ ಭರಿಸಲಿದೆ. ಇದೀಗ ಬಿಬಿಎಂಪಿ ಪ್ರತಿ ತಿಂಗಳು ಪಾವತಿಸುತ್ತಿರುವ ವಿದ್ಯುತ್ ಬಿಲ್‌ನ ಶೇ.50 ಹಣವನ್ನು ಕಂಪನಿಗೆ ನೀಡಿದರೆ ಸಾಕು. ಕಂಪನಿ ಅಳವಡಿಸುವ ಎಲ್ಲ ಕಂಬಗಳಲ್ಲೂ ಜಾಹೀರಾತು ಪ್ರದರ್ಶಿಸಿ ಬಾಡಿಗೆ ಪಡೆಯುತ್ತದೆ. ಈ ಹಣದಲ್ಲಿ ಬಿಬಿಎಂಪಿಗೆ ಶೇ.70 ಪಾಲು, ಶೇ. 30 ಕಂಪನಿ ಪಡೆಯುತ್ತದೆ. ಈ ಮೂಲಕ ಕಡಿಮೆ ವಿದ್ಯುತ್ ಬಳಕೆ ಜತೆಗೆ ಪಾಲಿಕೆಗೆ ಆದಾಯವೂ ಬರಲಿದೆ.**

# ಕಾಂಪೋಸ್ಟ್ ಸಂತೆಯನ್ನು ಮತ್ತಷ್ಟು ಜನಪ್ರಿಯಗೊಳಿಸಿ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಕಸ ಸಂಸ್ಕರಿಸಿ ಉಪಯುಕ್ತ ವಸ್ತುವನ್ನಾಗಿ ಮಾರ್ಪಡಿಸುವ ಕುರಿತು ಜಾಗೃತಿ ಮೂಡಿಸಲು ಆರಂಭಿಸಲಾಗಿರುವ ಕಾಂಪೋಸ್ಟ್ ಸಂತೆಯನ್ನು ಮತ್ತಷ್ಟು ಜನಪ್ರಿಯಗೊಳಿಸಿ, ಬೆಂಗಳೂರಿನ ನಿವಾಸಿಗಳು ಸಂಪೂರ್ಣವಾಗಿ ಇದರಲ್ಲಿ ತೊಡಗಿಕೊಳ್ಳುವಂತೆ ಮಾಡಬೇಕಿದೆ ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಹೇಳಿದ್ದಾರೆ.

**» ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಕರೆ**

**» ಬಿಬಿಎಂಪಿ 198 ವಾರ್ಡ್‌ಗಳಲ್ಲೂ ಆಯೋಜನೆ**

ಸರ್ವಜ್ಞನಗರ ಕ್ಷೇತ್ರದ ಎಚ್‌ಬಿಆರ್ ಬಡಾವಣೆಯಲ್ಲಿರುವ ಮಿನಿ ಫಾರೆಸ್ಟ್ ಪಾರ್ಕ್‌ನ ಸುತ್ತಮುತ್ತಲ ಪ್ರದೇಶದಲ್ಲಿ ಶನಿವಾರ ಆಯೋಜಿಸಿದ್ದ ಕಾಂಪೋಸ್ಟ್ ಸಂತೆ ಉದ್ಘಾಟಿಸಿ ಮಾತನಾಡಿದರು.

ಮನೆಗಳಲ್ಲಿ ಉತ್ಪತ್ತಿಯಾಗುವ ಕಸ ನಿರುಪಯುಕ್ತವಲ್ಲ. ಅದನ್ನು ಸಂಸ್ಕರಿಸಿದರೆ ಉಪಯುಕ್ತ ವಸ್ತುವಾಗುತ್ತದೆ ಎಂಬುದನ್ನು ತಿಳಿಸಿ ಕೊಡಲು ಕಾಂಪೋಸ್ಟ್ ಸಂತೆ ಆಯೋಜಿಸಲಾಗುತ್ತಿದೆ. ಹೆಚ್ಚಿನ ಜನರು ಇದರಲ್ಲಿ ಪಾಲ್ಗೊಂಡರೆ ನಗರದಲ್ಲಿನ ಕಸದ ಸಮಸ್ಯೆ ಪರಿಹಾರವಾಗುತ್ತದೆ ಎಂದು ಹೇಳಿದರು.

ಬಿಬಿಎಂಪಿಯ 198 ವಾರ್ಡ್‌ಗಳಲ್ಲೂ ಇಂತಹ ಸಂತೆಯನ್ನು ಆಯೋಜಿಸುತ್ತಿರುವುದು ಒಳ್ಳೆಯ ಉಪಕ್ರಮವಾಗಿದೆ. ವಾರ್ಡ್‌ನ ಎಲ್ಲ ನಾಗರಿಕರು ಸಂತೆಗೆ ಭೇಟಿ ನೀಡಿ, ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದು ಜಾರ್ಜ್ ಸಲಹೆ ನೀಡಿದರು.

### ಕಸವನ್ನು ಲಘುವಾಗಿ ಪರಿಗಣಿಸದಿರಿ

**ಈಗಾಗಲೇ ಹಲವು ವಾರ್ಡ್‌ಗಳಲ್ಲಿ ಕಾಂಪೋಸ್ಟ್ ಸಂತೆಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಕಸವನ್ನು ಲಘುವಾಗಿ ಪರಿಗಣಿಸಿ, ನಮ್ಮ ಮನೆಯಿಂದ ಹೊರಹೋದರೆ ಸಾಕು ಎಂಬ ಪ್ರವೃತ್ತಿ ಬೇಡ. ನಮ್ಮ ಸುತ್ತಲಿನ ಪರಿಸರವೂ ಸ್ವಚ್ಛವಾಗಿರಬೇಕು. ಅದಕ್ಕೆ ಪ್ರತಿಯೊಬ್ಬರ ಕೊಡುಗೆಯೂ ಅವಶ್ಯಕ ಎಂದು ಮೇಯರ್ ಜಿ. ಪದ್ಮಾವತಿ ಹೇಳಿದರು.**

---

ಪ್ರಜಾವಾಣಿ 5/3/17

**ನೀರಿನ ದಾಹ ಇಂಗಿಸಲು ಮುಂದಾದ ಜಲಮಂಡಳಿ**

# ಕೆಆರ್‌ಎಸ್: ಪರ್ಯಾಯ ಮಾರ್ಗದ ಹುಡುಕಾಟ

• ಬಸವರಾಜ ಹವಾಲ್ದಾರ



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಕೆಆರ್‌ಎಸ್ ಅಣೆಕಟ್ಟೆಯಲ್ಲಿ ನೀರು ಕಡಿಮೆಯಾಗಿರುವ ದೃಶ್ಯ

ಮಂಡ್ಯ: ಬೇಸಿಗೆಯಲ್ಲಿ ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ಹಲವು ನಗರ, ನದಿಗೆ ಹೊಂದಿಕೊಂಡಿರುವ ನೂರಾರು ಗ್ರಾಮಗಳ ಕುಡಿಯುವ ನೀರಿನ ದಾಹ ಇಂಗಿಸಲು ಕಾವೇರಿ ನೀರಾವರಿ ನಿಗಮವು ಹಲವು ಮಾರ್ಗಗಳನ್ನು ತಡಕಾಡುತ್ತಿದೆ.

ಹೇಮಾವತಿ ಅಣೆಕಟ್ಟೆಯಿಂದ ಕಳೆದ ಒಂದು ವಾರದಲ್ಲಿ 1.5 ಟಿಎಂಸಿ ಅಡಿ ನೀರು ಬಂದಿರುವುದು ಅಧಿಕಾರಿಗಳು ಸ್ವಲ್ಪ ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಆಗಿದೆ. ಆದರೂ, ಜೂನ್‌ವರೆಗೆ ನೀರು ಪೂರೈಸಲು ಬೇಕಾದ ಪರ್ಯಾಯ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಗುತ್ತದೆ.

ಕೆಆರ್‌ಎಸ್ ಅಣೆಕಟ್ಟೆಯ ನೀರಿನ ಮಟ್ಟವು 81.50 ಅಡಿ ಇದೆ. ಅಣೆಕಟ್ಟೆಯಲ್ಲಿ ಒಟ್ಟು 11.46 ಟಿಎಂಸಿ ಅಡಿಯಷ್ಟು ನೀರಿದ್ದು, ಅದರಲ್ಲಿನ 4.40 ಟಿಎಂಸಿ ಅಡಿ 'ಡೆಡ್ ಸ್ಟೋರೇಜ್' ತೆಗೆದರೆ ಬಳಕೆಗೆ ಲಭ್ಯವಾಗುವುದು ಕೇವಲ 7.06 ಟಿಎಂಸಿ ಅಡಿಯಷ್ಟು ಮಾತ್ರ. ಕಳೆದ ವರ್ಷ ಮಾರ್ಚ್ 4ರಂದು ಅಣೆಕಟ್ಟೆಯಲ್ಲಿ ಒಟ್ಟು 17.58 ಟಿಎಂಸಿ ಅಡಿಯಷ್ಟು ನೀರಿತ್ತು. ಅದರಲ್ಲಿ 13.18 ಟಿಎಂಸಿ ಅಡಿ ನೀರು ಬಳಕೆ ಲಭ್ಯವಿತ್ತು. ಹಾಗಾಗಿ ಕಳೆದ ಬಾರಿ ಕುಡಿಯುವ ನೀರಿಗೆ ತೊಂದರೆಯಾಗಿರಲಿಲ್ಲ.

**ಲೆಕ್ಕಾಚಾರ:** ಪ್ರತಿ ನಿತ್ಯ 800 ಕ್ಯುಸೆಕ್‌ನಂತೆ ನೀರು ಹರಿಸಬೇಕಾಗಬಹುದು ಎಂದು ಲೆಕ್ಕ ಹಾಕಲಾಗಿದೆ. ಅಣೆಕಟ್ಟೆಯಲ್ಲಿ ಲಭ್ಯ ಇರುವ ನೀರಿನಲ್ಲಿ ಜೂನ್‌ವರೆಗೂ ಕುಡಿಯುವ ನೀರು ಸರಬರಾಜು ಮಾಡುವ ಸವಾಲು ಕರ್ನಾಟಕ ನೀರಾವರಿ ನಿಗಮ ಹಾಗೂ ಬೆಂಗಳೂರಿನ ಜಲ ಮಂಡಳಿಯ ಮುಂದಿದೆ.

ಪ್ರತಿ ತಿಂಗಳಿಗೆ 2 ಟಿಎಂಸಿ ಅಡಿಯಷ್ಟು ನೀರು ಬೇಕಾಗುತ್ತದೆ. ಲಭ್ಯ ಇರುವ 7.06 ಟಿಎಂಸಿ ಅಡಿಯ ಜತೆಗೆ ಜೂನ್‌ವರೆಗೆ ಅಣೆಕಟ್ಟೆಗೆ 1.5 ಟಿಎಂಸಿ ಅಡಿಯಷ್ಟು ನೀರು ಹರಿದು ಬರಬಹುದು ಎಂದು ಅಂದಾಜಿಸಲಾಗಿದೆ.

**ಪರ್ಯಾಯ ಮಾರ್ಗ:** ಕುಡಿಯುವ ನೀರು ಸರಬರಾಜಿಗೆ ನೀರಿನ ತೊಂದರೆಯಾದರೆ ಡೆಡ್ ಸ್ಟೋರೇಜ್ ನೀರು ಬಳಸಿಕೊಳ್ಳಲು ಕಾವೇರಿ ನೀರಾವರಿ ನಿಗಮ ಹಾಗೂ ಬೆಂಗಳೂರು ಜಲ ಮಂಡಳಿ ಯೋಚಿಸಿವೆ.

ಮೊದಲು 1,500 ಎಚ್‌ಪಿಯ 17 ಪಂಪ್‌ಸೆಟ್‌ಗಳನ್ನು ಖರೀದಿಸಿ, 45 ದಿನಗಳ ಕಾಲ ನೀರು ಎತ್ತಲು 45 ಕೋಟಿ ವೆಚ್ಚದ ಪ್ರಸ್ತಾವವೊಂದನ್ನು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಸಿದ್ಧಪಡಿಸಿದ್ದರು. ಖರೀದಿ ವೆಚ್ಚ ಹೆಚ್ಚಾಗುವುದರಿಂದ ಜಲ ಮಂಡಳಿಯು ಈ ಪ್ರಸ್ತಾವವನ್ನು ಕೈಬಿಟ್ಟಿದೆ. ಈಗ ಪರ್ಯಾಯವಾಗಿ ಬಾಡಿಗೆ ತೆಗೆದುಕೊಂಡು ನೀರು ಎತ್ತುವ ಪ್ರಸ್ತಾವ ಸಿದ್ಧಪಡಿಸಲಾಗುತ್ತಿದೆ.

**ವಿದ್ಯುತ್ ಅಡ್ಡಿ:** ಕೇವಲ ಪಂಪ್‌ಸೆಟ್ ಬಾಡಿಗೆ ತೆಗೆದುಕೊಂಡು ನೀರು ಎತ್ತಿದರೆ ಹೆಚ್ಚು ಖರ್ಚಾಗುವುದಿಲ್ಲ. ಅದಕ್ಕೆ ಬೇಕಾದ ಜನರೇಟರ್‌ಗಳಿಗಾಗಿಯೇ ಹೆಚ್ಚಿನ ಖರ್ಚಾಗುತ್ತದೆ ಎನ್ನುತ್ತಾರೆ ಕಾವೇರಿ ನೀರಾವರಿ ನಿಗಮದ ಅಧಿಕಾರಿಯೊಬ್ಬರು.

## ವೈಟಿಪಿಎಸ್ ವಿದ್ಯುತ್ ಘಟಕ: 800 ಮೆಗಾವ್ಯಾಟ್ ತಲುಪಿದ ಉತ್ಪಾದನೆ

## ಫೇಸ್‌ಬುಕ್‌ನಲ್ಲಿ ಫೋಟೋ ಹಾಕಿ ಜೆಸ್ಕಾಂ ಎಂಜಿನಿಯರ್ ಆತ್ಮಹತ್ಯೆ ಯತ್ನ

**ಹಟ್ಟಿ ಚಿನ್ನದಗಣಿ:** ಮೇಲಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ಡೆತ್‌ನೋಟ್ ಬರೆದಿಟ್ಟು ಹಟ್ಟಿ ಜೆಸ್ಕಾಂ ಶಾಖೆಯ ಕಿರಿಯ ಅಭಿಯಂತರರೊಬ್ಬರು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಶನಿವಾರ ಬೆಳಗ್ಗೆ ನಡೆದಿದೆ. ಇಷ್ಟೇ ಅಲ್ಲದೆ, ಫೇಸ್‌ಬುಕ್‌ನಲ್ಲಿ 'ಮೈ ಲಾಸ್ಟ್ ಫೇಸ್' ಎಂದು ವಿಷ ಸೇವನೆಗೂ ಮುಂಚೆ ಭಾವಚಿತ್ರ ಅಪ್‌ಲೋಡ್ ಮಾಡಿದ್ದಾರೆ. ಹಟ್ಟಿ ಜೆಸ್ಕಾಂ ಕಚೇರಿ ಬಳಿ ನೆಲೆಸಿದ್ದ ಶ್ರೀಧರ ಜೋಶಿ ಆತ್ಮಹತ್ಯೆಗೆ ಯತ್ನಿಸಿದವರು. ಬೆಳಗ್ಗೆ ವಿಷ ಸೇವಿಸಿದ್ದು, ತಕ್ಷಣವೇ ಇವರನ್ನು ಚಿನ್ನದ ಗಣಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿದೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ.

**ಡೆತ್‌ನೋಟ್:** ವಿಷ ಸೇವನೆಗೂ ಮುಂಚೆ ಡೆತ್‌ನೋಟ್ ಬರೆದಿಟ್ಟ ಜೋಶಿ 'ನನ್ನ ಸಾವಿಗೆ ಜೆಸ್ಕಾಂನ ಹಿರಿಯ ಅಭಿಯಂತರ ಕೃಷ್ಣಪ್ಪ ಹಾಗೂ ಲಿಂಗಸ್ಗೂರು ಎಇಇ ದಾವಲಸಾಬ್ ನದಾಫ್ ಕಾರಣರು, ನನಗೆ ಮಾನಸಿಕ ಕಿರುಕುಳ ಹಾಗೂ ದೌರ್ಜನ್ಯ ಎಸಗುತ್ತಾ ಬಂದಿದ್ದಾರೆ ಎಂದು ದೂರಿದ್ದಾರೆ.

Page - 10

Udayavani → Page No-6

## ಮೇಲಧಿಕಾರಿಗಳ ಕಿರುಕುಳ ಜೆಸ್ಕಾಂ ಜೆಇ ಆತ್ಮಹತ್ಯೆಗೆ ಯತ್ನ

**ಹಟ್ಟಿ ಚಿನ್ನದ ಗಣಿ:** ಮೇಲಧಿಕಾರಿಗಳು ಮಾನಸಿಕ ಕಿರುಕುಳ ನೀಡುತ್ತಿದ್ದಾರೆಂದು ಪತ್ರ ಬರೆದಿಟ್ಟು ಹಟ್ಟಿ ಜೆಸ್ಕಾಂ ಶಾಖೆ ಕಿರಿಯ ಅಭಿಯಂತರ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ. ಹಟ್ಟಿ ಜೆಸ್ಕಾಂ ಕಚೇರಿ ಬಳಿ ವಾಸಿಸುತ್ತಿದ್ದ ಶ್ರೀಧರ ಜೋಶಿ ಶನಿವಾರ ಬೆಳಗ್ಗೆ ವಿಷ ಸೇವಿಸಿದ್ದು, ತಕ್ಷಣ ಅವರನ್ನು ಹಟ್ಟಿ ಚಿನ್ನದ ಗಣಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ರಾಯಚೂರು ರಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ವಿಷ ಸೇವನೆಗೂ ಮುನ್ನ ಡೆತ್‌ನೋಟ್ ಬರೆದಿರುವ ಶ್ರೀಧರ ಜೋಶಿ, 'ನನ್ನ ಸಾವಿಗೆ ಜೆಸ್ಕಾಂ ಹಿರಿಯ ಅಭಿಯಂತರ ಕೃಷ್ಣಪ್ಪ ಹಾಗೂ ಲಿಂಗಸುಗೂರು ಎಇಇ ದಾವಲಸಾಬ ನದಾಫ್ ಕಾರಣರು. ನನಗೆ ಮಾನಸಿಕ ಕಿರುಕುಳ ಹಾಗೂ ದೌರ್ಜನ್ಯ ಎಸಗುತ್ತಾ ಬಂದಿದ್ದಾರೆ. ಯಾವುದೇ ಕಾರಣವಿಲ್ಲದೆ ವರ್ಗಾವಣೆ ಮಾಡಿದ್ದಾರೆ. ರಜೆ ಮೇಲಿದ್ದರೂ ಬಿಡುಗಡೆ ಮಾಡಿರುತ್ತಾರೆ. ನನ್ನನ್ನು ಪರೋಕ್ಷವಾಗಿ ಸಾಯಿಸಲು ಹೊಂಚು ಹಾಕಿದ್ದಾರೆ. ನನ್ನ ಹೆಂಡತಿ, ಮಕ್ಕಳಿಗೆ ಎಸ್‌ಇ ಕೃಷ್ಣಪ್ಪ ಹಾಗೂ ಎಇಇ ದಾವಲಸಾಬ ಅವರೇ ಉತ್ತರ ನೀಡಬೇಕು. ನನ್ನದು ಯಾವ ತಪ್ಪೂ ಇಲ್ಲ, ನನ್ನ ಕುಟುಂಬದವರು, ಸ್ನೇಹಿತರು ನನ್ನನ್ನು ಕ್ಷಮಿಸಿ' ಎಂದು ಡೆತ್‌ನೋಟ್‌ನಲ್ಲಿ ಬರೆದಿದ್ದಾರೆ.



5/3/17

### ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ನವನಗರ, ಪಿ.ಬಿ. ರಸ್ತೆ, ಹುಬ್ಬಳ್ಳಿ.
ದೂರವಾಣಿ : 0836-2302682 Website :www.hescom.co.in
Email : itc.hescom@gmail.com

ಸಂ: ಹು.ವಿ.ಕ./ಕೈ.ತ.ಕೇಂ./ಪ್ರ.ವ್ಯ.(ತಾ)/2016–17/27576 ದಿನಾಂಕ : 04-03-2017

**ಪ್ರಕಟಣೆ**

ವಿಷಯ : 2017–18 ನೇ ಸಾಲಿನಲ್ಲಿ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ : 1) ಈ ಕಛೇರಿ ಪ್ರಕಟಣೆ ಸಂಖ್ಯೆ : ಹು.ವಿ.ಸ.ಕಂ/ಕೈ.ತ.ಕೇಂ./ಪ್ರ.ವ್ಯ.(ತಾ)/2586 ದಿ: 17–02–2017
2) ಪಿ.ಎಲ್.ಒ. ಕಡತ ಸಂಖ್ಯೆ–084/13–14 ಅನುಮೋದಿತ ಆಂತರಿಕ ಕಛೇರಿ ಟಿಪ್ಪಣಿ ದಿನಾಂಕ : 03–03–2017

2017–18 ನೇ ವರ್ಷದ ಅವಧಿಗಾಗಿ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 215 ಜನ ಶಿಶುಕ್ಷುಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಉಲ್ಲೇಖ (1) ರಂತೆ ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಹಾಗೂ ಅರ್ಜಿ ಹಾಗೂ ಸಂಬಂಧಿತ ದಾಖಲೆಗಳನ್ನು ಸಲ್ಲಿಸಲು ಇರುವ ಕೊನೆಯ ದಿನಾಂಕವನ್ನು **13.03.2017** ರ ವರೆಗೆ ವಿಸ್ತರಿಸಲಾಗಿದೆ ಉಳಿದೆಲ್ಲ ನಿಯಮಗಳು ಬದಲಾಗಿರುವುದಿಲ್ಲ.

ಸಹಿ/– ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಹು.ವಿ.ಸ.ಕಂ.ನಿ. ಹುಬ್ಬಳ್ಳಿ.